Regd. No. M 1299 SATYAVADI Fonnded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 29 ಸಂಚಿಕೆ 217 | ಶುಕ್ರವಾರ 24—5—46 | ಬಿಡಿ ಪ್ರತಿ 3 ಪೈ

ಸಂಸ್ಥಾನದ ಸುದ್ದಿಗಳು

ಬೆಂಗಳೂರು ನಗರದಲ್ಲಿ ಒಳಚರಂಡಿ ತೆಗೆಯುವ ಕೆಲಸಗಳಿಗಾಗಿ ರೂ. 3. 08 ಕ್ಷ ಶಿಫಾರಸಾಗಿರುವುದಾಗಿ ತಿಳಿಯು ಬಂದಿದೆ. ನಗರ ಸಭೆಯು ಸಹಾ ಈ ಹಣವನ್ನು ವಿನಿಯೋಗ ಮಾಡ ಬೇಕೆಂದು ಗೊತ್ತಾಗಿದೆ.

ಂ ಂ

ಬೆಂಗಳೂರಿನ ಪಡಿ ಭತ್ಯಾಧಿಕಾರಿಗ ಳಾದ ಶ್ರೀ ಅನಂತರಾಮಯ್ಯನವರನ್ನು ಗ್ರಾಮಾಂತರ ರೇಷನಿಂಗ್ ಜಾರಿಯ ಬಗ್ಗೆ ವಿಶೇಷಾಧಿಕಾರಿಗಳನ್ನಾಗಿ ತೆಗೆದು ಕೊಳ್ಳಲಾಗಿದೆ

ಂ ಂ

ಮೈಸೂರು ಸಂಸ್ಥಾನದ ಕ್ಷಾಮ ಪ್ರದೇಶಗಳಲ್ಲಿ ಪ್ರವಾಸ ಮಾಡುವ ಸಲುವಾಗಿ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಸದಸ್ಯರಾದ ಶ್ರೀ ಪೌಂಕರ್‌ರವರು ನಿನ್ನೆ ಬೆಂಗಳೂರಿಗೆ ಆಗಮಿಸಿರುವರು.

ಂ ಂ ಂ

ಸಂಸ್ಥಾನದ ಸಹಾಯ ವಿದ್ಯಾ ಸಂಸ್ಥೆಯ ಕೆಲಸಗಾರರಿಗೆ ಸರ್ಕಾರವು ರೂ. 5 ತುಟ್ಟಿ ಭತ್ಯ ಕೊಡಲು ಒಪ್ಪಿದೆ

ಂ ಂ

ಕಳೆದ ತಾ|| 21 ರಲ್ಲಿ ತಿಪಟೂರಿನ ಸಿನಿಮಾ ರಸ್ತೆಯಲ್ಲಿ ಒಂದು ಬಸ್ಸು ಲಕ್ಷ್ಮೀನಾರಾಯಣ ಎಂಬ 7 ವರ್ಷದ ಬಾಲಕನ ಮೇಲೆ ಹರಿದು ಸತ್ತನು. ತನಿಖೆ ನಡೆಯುತ್ತಿದೆ.

ಂ ಂ

ಲೋಕ ಕಲ್ಯಾಣಾರ್ಥವಾಗಿ ಬೆಂಗಳೂರಿನ ಶ್ರೀ ಲಲಿತಾ ಪರಮೇಶ್ವರಿ ಸೇವಾ ಸಮಿತಿಯವರು ಜೇಷ್ಠ ಮಾಸದಲ್ಲಿ ಶಂಕರ ಮಠದಲ್ಲಿ ಗಾಯತ್ರಿ ಹೋಮ ನಡೆಸುವರು.

ಂ ಂ

ಮೇ ತಾ|| 16 ರಿಂದ ಪುನಃ 14 ದಿವಸಗಳ ರಜೆಯನ್ನು ಮೈಸೂರು ರೈಲ್ವೆ ಯು ಜನರಲ್ ಮೇನೇಜರ್, ಶ್ರೀರಂಗಾಚಾರ್ಯರಿಗೆ ಮಂಜೂರು ಮಾಡಿರುವುದಾಗಿಯೂ ತಂದನಂತರ ಅವರು ಅಧಿಕಾರ ನಿವೃತ್ತಿ ಹೊಂದುವುದಾಗಿಯೂ ಪ್ರಭುತ್ವ ಪ್ರಕಟಣೆ ತಿಳಿಸುತ್ತದೆ.

ನಗರ ವಾರ್ತೆ

ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದ 70 ನೇ ಉಪನ್ಯಾಸಮಾಲೆ ಕುಣಿಗಲ್ ಮುನಿಸಾಫರ್ ಪಾಠಶಾಲೆಯಲ್ಲಿ ಮೇ 25 ಮತ್ತು 26 ನೇ ತಾರೀಖು ಸಂಜೆ 6 ಘಂಟೆಗೆ ಪೌರಸಭೆಯ ಆಶ್ರಯದಲ್ಲಿ ಜರಗುವುದು.

ಮೊನ್ನೆಯ ದಿವಸ ಡಿ. ಸುಬ್ಬಯ್ಯ ರಸ್ತೆಯಲ್ಲಿ ಸಂಪೂರ್ಣ ದಿವಸೆನಲ್ಲಿ ನೀರು ದೊರೆಯಲಿಲ್ಲವಾಗಿ ತಿಳಿದು ಬಂದಿದೆ.

ಪ್ರಪಂಚದಲ್ಲೆ ಅತ್ಯುತ್ತಮವಾದ್ದು

ಟೊರೆಂಟೊ ಮೇ 21 — ಅಟಂ ಪರಿಶೋಧನೆಯ ಅತ್ಯಂತ ಶಕ್ತಿದಾಯಕವಾದ ಅಸ್ತ್ರಗಳು ಕೆನಡಾದಲ್ಲಿ ಉಪಯೋಗಿಸಲಾಗುವುದೆಂದು ಹೇಳಲಾಗಿದೆ

ಂ ಂ

ಕಾಂಗ್ರೆಸ್ಸಿಗೆ ಸ್ಥಳ ಕೊಡಲು

ಸಿಮ್ಲಾ ಮೇ 22 — ನಿಯೋಗದ ಸೂಚನೆ ಮೇರೆಗೆ ತಮ್ಮ ಹೇಳಿಕೆಯಲ್ಲಿ ಕಾಂಗ್ರೆಸ್ಸಿಗೆ ಸ್ಥಳ ಕೊಡಲು ಪಾಕಿಸ್ತಾನವು ತಿರಸ್ಕರಿಸಲ್ಪಟ್ಟಿರುವುದೆಂದಿರುವರು.

ಂ ಂ

೬ ಕಾಸಿನ ಕಾರ್ಡುಗಳು

ಜುಲೈ 1 ನೇ ತಾರೀಖಿನಿಂದ ಪೋಸ್ಟು ಕಾರ್ಡುಗಳು ಬೆಲೆ 6 ಕಾಸು.

ಂ ಂ

ಸಂಸ್ಥಾನಗಳ ಮೇಲಿನ ಅಧಿಕಾರ

ನವದೆಹಲಿ ಮೆ 22 — ನರೇಂದ್ರ ಮಂಡಲಾಧ್ಯಕ್ಷರಿಗೆ ಮಂತ್ರಿಮಂಡಲ ನಿಯೋಗ ಕೊಟ್ಟಿರುವ ಮೆಮೊರಾಂಡಿನಲ್ಲಿ ಸಂಸ್ಥಾನಗಳ ಮೇಲಿನ ಅಧಿಕಾರವನ್ನು ಭಾರತೀಯ ಸರಕಾರಕ್ಕೆ ವರ್ಗಾಯಿಸುವುದಿಲ್ಲವೆಂದೂ ಸಂಸ್ಥಾನಗಳು ಅರ್ಪಿಸಿರುವ ಹಕ್ಕುಭಾಧ್ಯತೆ.

ಂ ಂ

೬೭ ಲಕ್ಷ ರೂಪಾಯಿನ ಖುಷಾ ವುತ್ತಿನ ಮನೆ

ಕಲ್ಕತ್ತಾದ ಒಬ್ಬ ಧನವಂತ ವ್ಯಾಪಾರಿಗೆ ಕಟ್ಟಿಡ ಕಟ್ಟಲು ನಕಾಸೆ ತಯಾರಿಸಿರುವ ಲಂಡನ್ನಿನ ಸುಪ್ರಸಿದ್ಧ ಶಿಲ್ಪಿ ಸರ್ ವಿಲಿಯಂರವರು ಕಟ್ಟಡ ತಯಾರಿಕೆ ನೋಡಲು ಬರುವರಾಗಿರುವರು. ಈ ಕಟ್ಟಡ ೭೦ ಅಂತಸ್ತಿದ್ದು ೧೨೦ ಮಂದಿ ವಾಸಿಸಲು ಅನುಕೂಲವಾಗಿದೆ. ಇದನ್ನು ಕಟ್ಟಲು ೬೭ ಲಕ್ಷ ರೂ. ಖರ್ಚಾಗುತ್ತಿದೆ.

ಮಂತ್ರಿಗಳೇ ಲಂಚ ಕೊಟ್ಟರು

ಮಂತ್ರಿಗಳು ಲಂಚ ಕೊಟ್ಟರು

ಪಾಟ್ನಾ, ಮೇ 22 — ಭಕ್ತಿಯಾರಪುರದಲ್ಲಿ ರೈಲ್ವೆ ಕ್ರಾಸ್ ರಸ್ತೆಯಲ್ಲಿನ ಗೇಟಿನ ವ್ಯಾಲಕ ಬಿಹಾರು ಆರ್ಥಿಕ ಮಾತ್ರಿ ಸಿನ್ಹರು ಬರಬೇಕಾಯಿತು. ಕಾವಲುಗಾರನು ಬಿಡದಿರಲು ರೂ. 2 ಲಂಚ ಕೊಟ್ಟರು. ಈ ವಿಷಯವನು ಪೋಲೀಸರಿಗೆ ತಾವೇ ತಿಳಿಸಿದರು.

ಡಾಕಾದ ಕೆಲಕಡೆ ಅಕ್ಕಿ ಮಣಕ್ಕೆ 35 ರೂ ಬೆಲೆ.

ಪಾಟ್ನಾದಲ್ಲಿ ಸಕ್ಕರೆ ರೇಷ್ ಕಡಿಮೆ ಮಾಡಲಾಗಿದೆ.

ಮದರಾಸು ಮೇ 22 — ಹಿಂದೂ ಹೆಂಗಸರ ಹಕ್ಕಿನ ಹೊಸ ಮಸೂದೆಗೆ ಮೈಸೂರಾಯರ ಅಂಗೀಕಾರ ದೊರೆತಿದೆ.

ಚಿತ್ತಾರು ಮೇ 22 — ಬಡವರಿಗೆ ರೇಷ್ ಅಂಗಡಿಗಳಲ್ಲಿ ಕೊಡಲ್ಪಡುತ್ತಿರುವ ಅಕ್ಕಿ ಕೀಳುದರ್ಜೆಯಿದೆಂದು 12 ವರ್ಷದ ಹುಡುಗ ಗ್ರಾಮರಲ್ಲಿ ವಿಜ್ಞಾಪಿಸಿ ಕೊಂಡನು.

ಕಲ್ಕತ್ತಾ, ಮೇ 21 — ಬರ್ದವಾನಿನ ಒಂದು ಹಳ್ಳಿಯಲಿ ಕೋಮುವಾರು ಕಲಹವಾಗಿ ೮ ಮಂದಿ ಮಡಿದರೆಂದು ವಂದಿಯಾಗಿದೆ.

ಬೊಂಬಾಯಿ ಮೆ 21 — ಅಸೆಂಬ್ಲಿ ಅಧಿವೇಶನ ಪ್ರಾರಂಭವಾಗುವುದಕ್ಕೆ ಮುಂಚೆ ಮುಸ್ಲಿಂ ನಡೆಸುತ್ತಿರುವ ಕೆಲಸಗಾರರ ಗುಂಪು ಅಸೆಂಬ್ಲಿ ಚೇಂಬರ್ ಮುಂದೆ ಗಲಾಟೆ ಮಾಡಿ ಎಷ್ಟು ಹೇಳಿದರು, ಕೇಳಲಿಲ್ಲವಾಗಿ ಒತ್ತಾಯದಿಂದ ಚದುರಿಸಲಾಯಿತು.

ವೃತ್ತಾಂತ ಸಂಗ್ರಹ

ಕಾಶ್ಮೀರದ ಗಲಭೆಯಲ್ಲಿ ಅರು ಮುಂದಿ ಸತ್ತರು ಎಪ್ಪತ್ತು ಮಂದಿ ಗಾಯಗೊಂಡರು ಪರಿಸ್ಥಿತಿ ಸ್ವಲ್ಪ ಸುಧಾರಿಸಿದೆ.

ಂ ಂ

ಪಾಕೀಸ್ತಾನದ ಸಮಸ್ಯೆ ಬಗ್ಗೆ ತಮಗೆ ಬೆಂಬಲ ಕೀಯಬೇಕೆಂದು ಇರಾಕಿನ ಪಂಚರಾಜಕೀಯ ಪಕ್ಷಗಳು ರಷ್ಯಕ್ಕೆ ಪ್ರಾರ್ಥನೆ ಸಲ್ಲಿಸಿದೆ.

ಂ ಂ

ಬ್ರಿಟಿಷ್ ಹಡಗುಗಳ ಮೇಲೆ ಗುಂಡುಹಾರಿಸಿದ್ದಕ್ಕಾಗಿ ಅಲ್ಬೇನಿಯಾವನ್ನು ಬ್ರಿಟಿಷ್ ಖಂಡಿಸಿದೆ.

ಂ ಂ

ನಿಕ್ಕಲ್‌ನಲ್ಲಿ ಅರ್ಧ ಮತ್ತು ಕಾಲು ರೂಪಾಯಿಗಳನ್ನು ಅಚ್ಚು ಹಾಕುವುದಾಗಿ ಕೇಂದ್ರ ಸರ್ಕಾರ ಪ್ರಕಟಿಸಿದೆ. ಈ ನಡವಳಿಕೆ ಅಮೆರಿಕಾ ಬೆಳ್ಳಿ ಸಾಲವನ್ನು ತೀರಿಸುವುದಕ್ಕೆಂದು ಹೇಳಲಾಗಿದೆ.

ಂ ಂ

ಅಸ್ಸಾಂ ಕಾಂಗ್ರೆಸ್ ಮಂತ್ರಿಮಂಡಲದ ಪ್ರತಿಭಟನಾರ್ಥವಾಗಿ ಅನ್ನ ಸತ್ಯಾಗ್ರಹ ಮಾಡುತ್ತಿರುವ, ಅಸ್ಸಾಂ ಲೀಗಿನ ಅಧ್ಯಕ್ಷ ಮೌಲಾನ ಅಬ್ದುಲ್ ಹಮಿದ್‌ಖಾನರ ಸ್ಥಿತಿ ಚಿಂತಾಜನಕವಾಗಿದೆ.

ಂ ಂ

ಜಿನ್ನಾರವರು ಕೊಟ್ಟ ಹೇಳಿಕೆಯ ಬಗ್ಗೆ ರಾಜಕೀಯ ವೃತ್ತದಲ್ಲಿ ನಿರಾಶೆ ಉಂಟಾಗಿದೆಯೆಂದು ದೆಹಲಿ ವಾರ್ತೆ ತಿಳಿಸುತ್ತದೆ.

ಂ ಂ

ವಾಷಿಂಗ್ಟನ್ನಿನಲ್ಲಿ ಸೇರಿರುವ ಸಂಯುಕ್ತ ಆಹಾರ ಸಮ್ಮೇಳನದಲ್ಲಿ ಭಾರತ ಪ್ರತಿನಿಧಿ ಸರ್ ರಾವ್ ಪ್ರತಿದೇಶವೂ ರೇಷನ್ ನಿಯಮಕ್ಕೊಳಗಾಗಬೇಕು ; ಇದದಿದ್ದರೆ ಆಹಾರ ಸಮವಾಗಿ ದೊರೆಯುವುದಿಲ್ಲವೆಂದಿರುವರು.

ಂ ಂ

ಸಂಯುಕ್ತ ಆಹಾರ ಸಮ್ಮೇಳನದಲ್ಲಿ ಭಾರತಕ್ಕೆ ಸರಿಯಾದ ಸಹಾಯ ದೊರೆತಿಲ್ಲವೆಂದು ಚೀನಾ ಪ್ರತಿನಿಧಿ ತಿಳಿಸಿರುವರು.

ಇದಲ್ಲವೆ ನ್ಯಾಯ

ಅಮೇರಿಕಾದಲ್ಲಿಯ ಡಾಲಸ್‌ನಲ್ಲಿ ಒಬ್ಬ ಜಟ್ಟಿಯು ಆವೇಶದಿಂದ ಅತಿ ಗಟ್ಟಿಯಾಗಿ ಮಾತನಾಡಿ, ಆವೇಶವು ತಗ್ಗಿದ ನಂತರ ನ್ಯಾಯಾಸ್ಥಾನದ ಮರ್ಯಾದೆಯನ್ನು ಧಿಕ್ಕರಿಸಿದ್ದಕ್ಕಾಗಿ ತನಗೆ 5 ಡಾಲರುಗಳ (ಸುಮಾರು 16 ರೂ.) ಜುಲ್ಮಾನೆಯನ್ನು ವಿಧಿಸಿಕೊಂಡಿರುವನು.

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;

ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು

ಸಾಬೂನು

ಕೊಳಕು ಬಟ್ಟೆಗಳನ್ನು

ಸ್ವಚ್ಛಗೊಳಿಸುವುದ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಸುಖ ಆರೋಗ್ಯ ಆನಂದದಾಯಕ

ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ. ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು. ಅರ್ಧ, ಕಾಲು ಪೌಂಡು ಮತ್ತು ಒಂದು ಸೇರು ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂಧ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ವಿನೋದ

ಮಗ — (ತಾಯಿ ಸತ್ತುಹೋಗುವ ಕಾಲದಲ್ಲಿ) ನಿನ್ನ ಕೊರಿಕೆಯನ್ನು ನಾನು ನೆರವೇರಿಸುವೆನು.

ತಾಯಿ — ನಾನು ಇನ್ನು ಸ್ವಲ್ಪ ದಿನ ಬದುಕಬೇಕು.

At Ranjit

From 24-5-46

DIL KI BAAT

ಈಶ್ವರಲಾಲ್ — ದುರ್ಗಾಕೋಟೆ

ಪಾತ್ರವಹಿಸಿರುವ

ದಿಲ್ ಕಿ ಬಾತ್

For Good Printing

L. N. Press

Sriramp et MYSORE

ಅರರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು,

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ರಂಗು ಅಯ್ಯಯ್ಯೋ ಪ್ರಾಣ ಹೋಯ್ತಲ್ಲಪ್ಪಾ ರಾಮು—ಇನ್ನು ಮಾತಾಡ್ತಾನೇ ಇದ್ದೀಯಲ್ಲಯ್ಯಾ.

ಂ ಂ ಂ

ತಂದೆ—ಒಲೆ ಉರಿತಾ ಇದೆಯೂ ನೋಡು ಮಗು ಮಗು — ಇಲ್ಲ ಅಪ್ಪಾ ಸೌದೆ ಉರಿತಾ ತಇದೆ.

ಂ ಂ

ಓರ್ವಸ್ನೇಹಿತ ತನ್ನ ಸ್ನೇಹಿತನು ಹೊಸ ಚಪ್ಪಲಿಗಳನ್ನು ಹಾಕಿದ್ದನ್ನು ಕಂಡು 'ಏನಯ್ಯ ! ಹೊಸಚಪ್ಪಲಿ ? ಎಷ್ಟು ಕೊಟ್ಟೆ' ಎಂದಿನಂತೆ ಅದಕ್ಕೆ ಅವನು '4 ರೂಗಳು' ಎಂದು ಉತ್ತರ ವಿತ್ತನಂತೆ

ಅದಕ್ಕೆ ! ಅದೇನಯ್ಯೆ ! 4 ರೂಪಾಯಿ ವಿಪರೀತ ಎಕ್ಕಡಕ್ಕೂ ಬೆಲೆಯೇರಿದೆಯೇ ?'

ಅವನು 'ಹ್ಞೂ ಅಪ್ಪ ಯುದ್ಧ ಅಂದ....,

'ಹೋ ! ಹಾಗಾದರೆ ಯುದ್ಧದಲ್ಲಿ ಎಕ್ಕಡದಲ್ಲಿ ಹೊಡೆದಾಡುತ್ತಾರೇನು ?'

(ವೈ)

.....

Get Medical Diplomas

At home : — Ayurvedic Homeopathic, Unani, etc. Prospectus Free.

Old Indian Medical College Kotgarh, Simla

Edited, Printed and published by M. S. Krishna Rao, at the Satvavaip Press, Chamaraja Agrahar, Mysore



At Opera

.... 6 ನೇ ವಾರ

ಹೊನ್ನಪ್ಪ ಭಾಗವತರ್

ಟಿ. ಆರ್. ರಾಜಕುಮಾರಿ

ವಸಂತಕೋಕಿಲಂ, ಬಾಲಯ್ಯ

ಕಾಳಿ ಎಕ್ ರತ್ನಂ ಪಾತ್ರವಹಿಸಿರುವ

ವಾಲ್ಮೀಕಿ